# ಎಂಎಸ್ಎಂಇ ಡಿಜಿಟಲ್ ಪ್ಲಾಟ್‌ಫಾರಂಗೆ ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್ ಚಾಲನೆ

ಬೆಂಗಳೂರು:ಸೆಬಿ ನೋಂದಾಯಿತ ಕ್ರೆಡಿಟ್ ರೇಟಿಂಗ್ ಏಜೆನ್ಸಿಯಾಗಿರುವ ಬ್ರಿಕ್‌ವರ್ಕ್ ರೇಟಿಂಗ್ಸ್‌ನ ಒಡೆತನದಲ್ಲಿರುವ ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್ ಎಂಎಸ್ಎಂಇ1 ಸೇವೆಯನ್ನು ಆರಂಭಿಸಿದೆ. ಇದು ಡಿಜಿಟಲ್ ವೇದಿಕೆಯಾಗಿದ್ದು ಅತಿಸಣ್ಣ, ಸಣ್ಣಮತ್ತುಮಧ್ಯಮ ಪ್ರಮಾಣದ ಉದ್ಯಮಗಳಿಗೆ ಎಲ್ಲ ರೀತಿಯ ಡಿಜಿಟಲ್ ಸೇವೆಯನ್ನು ಒದಗಿಸಲಿದೆ.

ಎಂಎಸ್ಎಂಇ ಪರ್ಫಾಮೆನ್ಸ್ ಗ್ರೇಡಿಂಗ್, ಡ್ಯೂ ಡಿಲಿಜೆನ್ಸ್, ಬಿಡಬ್ಲ್ಯುಎ ಪ್ರಮಾಣಿತ ಸರ್ಟಿಫಿಕೇಷನ್ ಮತ್ತು ಕಂಪೆನಿ ಪ್ರೊಫೈಲಿಂಗ್ ಇದರಲ್ಲಿ ಸೇರಿದೆ. ತಾಂತ್ರಿಕವಾಗಿ ಮುಂದುವರೆದಿರುವ ಈ ಡಿಜಿಟಲ್ ವೇದಿಕೆ, ಎಲ್ಲ ಸಮಯದಲ್ಲಿಯೂ ವೆಬ್ ಮೂಲಕ ಸೇವೆಗೆ ಲಭ್ಯವಿದ್ದು, ಬಳಕೆದಾರರಿಗೆ ಅನುಕೂಲಕರವಾದ ಮತ್ತು ಕೊಡುಗೆ ಖರೀದಿಯಿಂದ ದಾಖಲೆಗಳನ್ನು ಅಪ್‌ಲೋಡ್ ಮಾಡುವುದರಿಂದ ಪರಿಪೂರ್ಣ ವರದಿ ಪಡೆಯು ವವರೆಗೂ ಕಾಗದರಹಿತ ಅನುಭವವನ್ನು ಒದಗಿಸುತ್ತದೆ ಎಂದು ಕಂಪೆನಿ ಹೇಳಿದೆ.

ಬ್ರಿಕ್‌ವರ್ಕ್ ಅನಾಲಿಟಿಕ್ಸ್ ಗ್ರೇಡಿಂಗನ್ನು ಸ್ವತಂತ್ರವಾಗಿ ಪ್ರಮಾಣಿಸಿ, ಮೌಲ್ಯಮಾಪನಗೊಳಿಸಿ, ಉದ್ಯಮಗಳ ಕಾರ್ಯಕ್ಷಮತೆ, ಆರ್ಥಿಕ ಮತ್ತು ನಿರ್ವಹಣೆ ಸಾಮರ್ಥ್ಯವನ್ನು ವಿಶ್ಲೇಶಿಸಲಾಗುತ್ತದೆ. ಕಂಪೆನಿಯ ಒಟ್ಟಾರೆ ಕ್ರೆಡಿಟ್ ಸಾಮರ್ಥ್ಯವನ್ನು ಇದರ ಮೂಲಕ ಅಳೆಯಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್‌ನ ರಿಸ್ಕ್ ಮತ್ತು ಅನಾಲಿಟಿಕ್ಸ್‌ನ ಮುಖ್ಯಸ್ಥರಾದ ರೀಟಾಬನ್ ಬಸು ಮಾತನಾಡಿ ಬಿಡಬ್ಲ್ಯುಎ ಗ್ರೇಡಿಂಗ್‌ನಿಂದಾಗಿ ಕಂಪೆನಿಗಳು ತಮ್ಮ ವಿಶ್ವಾಸಾರ್ಹತೆಯನ್ನೂ ಹೆಚ್ಚಿಸಿಕೊಳ್ಳಬಹುದು. ತಮ್ಮ ಗ್ರಾಹಕರು, ಪೂರೈಕೆದಾರರು ಹಾಗೂ ಹಣಕಾಸು ನೆರವು ನೀಡುವವರಲ್ಲಿ ಆತ್ಮವಿಶ್ವಾಸವನ್ನು ತುಂಬಿಸಬಹುದು. ಗ್ರೇಡಿಂಗ್ ವರದಿಯಿಂದ ಈ ಸಮುದಾಯ ಉದ್ಯಮದ ಅಭಿವೃದ್ಧಿಯ ಸಾಧ್ಯತೆಗಳನ್ನು ಸಮಗ್ರವಾಗಿ ಅರ್ಥೈಸಿಕೊಂಡು ಅದಕ್ಕೆ ತಕ್ಕ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಹೇಳಿದರು.

ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್ ಸಾಮರ್ಥ್ಯ ಗ್ರೇಡಿಂಗ್‌ಗನ್ನು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ ಅತ್ಯುತ್ತಮವಾದ ಬಿಡಬ್ಲ್ಯುಎ ಎಸ್ಎಂಇ1 ರಿಂದ ಅತಿ ಕಳಪೆ ಸಾಧನೆಯ ಬಿಡಬ್ಲ್ಯುಎ ಎಸ್ಎಂಇ8 ವರೆಗೆ ನೀಡಲಾಗುತ್ತದೆ.

ಹಣಕಾಸು ವಿಶ್ಲೇ?ಣೆ, ಉತ್ಪಾದಿಸುವ ಮತ್ತು ವಹಿವಾಟಿನ ಉತ್ಪನ್ನದ ಸ್ವರೂಪ ಮತ್ತು ಮಾರುಕಟ್ಟೆಯಲ್ಲಿ ಅದಕ್ಕಿರುವ ಬೇಡಿಕೆ, ಪ್ರಕ್ರಿಯೆಯಲ್ಲಿರುವ ಅಪಾಯ, ಮಾರುಕಟ್ಟೆಯಲ್ಲಿ ಸ್ಪರ್ಧೆಯ ಬಲ, ನಿರ್ವಹಣೆ ಗುಣಮಟ್ಟ ಮತ್ತು ಉದ್ಯಮ ಕ್ಷೇತ್ರದ ಪರಿಸ್ಥಿತಿ ಈ ಐದು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಗ್ರೇಡಿಂಗ್ ನೀಡಲಾಗುತ್ತದೆ.